**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:23-12-2020.

# ಆದೇಶ

1) ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಯಂತೆ ರಾಜ್ಯ ಸರ್ಕಾರವು ಕೋವಿಡ್-19ರ ನಿಗಾವಣೆ, ನಿಯಂತ್ರಣ ಮತ್ತು ಜಾಗ್ರತೆಗೆ ಸಂಬಂಧಿಸಿದಂತೆ ವ್ಯವಸ್ಥಿತವಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡ ಕಾರಣ ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುವಿಕೆಯು ಕಳೆದ 2 ತಿಂಗಳಿನಿಂದ ಗಣನೀಯವಾಗಿ ಇಳಿಮುಖವಾಗಿದೆ.

2) ಭಾರತ ಸರ್ಕಾರದ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-I(ಎ) ದಿನಾಂಕ:25.11.2020ರಲ್ಲಿ ಕೋವಿಡ್-19ರ ನಿಗಾವಣೆ, ನಿಯಂತ್ರಣ ಮತ್ತು ಜಾಗ್ರತೆಗೆ ಸಂಬಂಧಿಸಿದಂತೆ ಹೊರಡಿಸಲಾದ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್ಆರ್ 2020, ದಿನಾಂಕ:27.11.2020ರಲ್ಲಿ ಯಥಾವತ್ತಾಗಿ ದಿನಾಂಕ:31.12.2020ರವರೆಗೆ ಜಾರಿಗೊಳಿಸಿದೆ.

3) ಪ್ರಸ್ತುತ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಹೊಸದಾಗಿ ರೂಪಾಂತರಗೊಂಡಿರುವ SARS-CoV2 ವೈರಾಣು ಪತ್ತೆಯಾಗಿದ್ದು, ತೀವ್ರ ಗತಿಯಲ್ಲಿ ಹರಡಿ ಮತ್ತು ಬೆಳವಣಿಗೆ ಹೊಂದುತ್ತಿದೆ. ಅಲ್ಲದೇ, ಯುನೈಟೆಡ್ ಕಿಂಗ್‌ಡಮ್‌ನಿಂದ ರಾಜ್ಯಕ್ಕೆ ಇತ್ತೀಚೆಗೆ ಆಗಮಿಸಿರುವ ಪ್ರಯಾಣಿಕರಲ್ಲಿ ಕೋವಿಡ್-19 ಪಾಸಿಟಿವ್ ಇರುವುದು ಕಂಡುಬಂದಿರುತ್ತದೆ. ಆದಾಗ್ಯೂ, ಹೊಸ ರೋಗ ಲಕ್ಷಣಗಳ ಪತ್ತೆಗಾಗಿ ಈ ಪ್ರಯಾಣಿಕರ ಮಾದರಿ (Samples) ಗಳನ್ನು ಹೆಚ್ಚಿನ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

4) ಆದ್ದರಿಂದ, ಹೊಸ ಆವೃತ್ತಿಯ SARS-CoV2 ವೈರಾಣು ಹರಡುವುದನ್ನು ತಡೆಗಟ್ಟಲು ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ, ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಪ್ರಕರಣ 24ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಈ ಕೆಳಗೆ ಸಹಿ ಮಾಡಿರುವ ನಾನು ರಾಜ್ಯಾದ್ಯಂತ 24ನೇ ಡಿಸೆಂಬರ್ 2020 ರಿಂದ 01ನೇ ಜನವರಿ 2021ರವರೆಗೆ ಪ್ರತಿ ದಿನ ರಾತ್ರಿ 11:00 ಗಂಟೆಯಿಂದ ಬೆಳಿಗ್ಗೆ 5:00 ಗಂಟೆಯವರೆಗೆ (2ನೇ ಜನವರಿ 2021ರ ಬೆಳಿಗ್ಗೆ 5:00 ಗಂಟೆಯ ವರೆಗೆ) **ರಾತ್ರಿ ಕರ್ಫ್ಯೂ** ವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಘೋಷಿಸಿರುತ್ತೇನೆ. ಈ ಆದೇಶವನ್ನು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಪೊಲೀಸ್ ಆಯುಕ್ತರುಗಳು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಇತರೆ ಇಲಾಖಾ ಮುಖ್ಯಸ್ಥರುಗಳು ಮತ್ತು ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

1. ಅತ್ಯವಶ್ಯಕ ಸೇವೆಗಳನ್ನು ಹೊರತುಪಡಿಸಿ **ರಾತ್ರಿ 11:00 ರಿಂದ ಬೆಳಿಗ್ಗೆ 5:00 ಗಂಟೆಯವರೆಗೆ** ಜನರ ಸಂಚಾರವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ.
2. ಸರಕು ಸಾಗಾಣಿಕೆ ವಾಹನಗಳು, ಖಾಲಿ ವಾಹನಗಳನ್ನು ಒಳಗೊಂಡಂತೆ ಎಲ್ಲಾ ಮಾದರಿಯ ಸರಕು ಸಾಗಾಣಿಕೆಗೆ ಯಾವುದೇ ನಿರ್ಬಂಧವಿರುವುದಿಲ್ಲ.
3. ರಾತ್ರಿ ಪಾಳಯದಲ್ಲಿ ಕರ್ತವ್ಯ ನಿರ್ವಹಿಸುವ ಅವಶ್ಯಕತೆ ಇರುವಂತಹ ಎಲ್ಲಾ ಕೈಗಾರಿಕೆಗಳು/ ಕಂಪನಿಗಳು/ ಸಂಸ್ಥೆಗಳು ಶೇ.50ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಲು ಅನುಮತಿಸಿದೆ. ಇಂತಹ ಸಂಸ್ಥೆಗಳ ಸಿಬ್ಬಂದಿಗಳು ಆಯಾ ಸಂಸ್ಥೆಗಳು ನೀಡಿರುವ ಅಧಿಕೃತ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು.

ಶಿಖರಿ

4. ದಿನದ 24 ಗಂಟೆಗಳು ಅತ್ಯವಶ್ಯಕವಾಗಿ ಕಾರ್ಯಾಚರಿಸಬೇಕಾದಂತಹ ಕೈಗಾರಿಕೆಗಳು ಮತ್ತು ಕಾರ್ಖಾನೆಗಳಿಗೆ ಯಾವುದೇ ನಿರ್ಬಂಧಗಳಿಲ್ಲದೇ ಅನುಮತಿಸಿದೆ.

5. ದೂರದ ಪ್ರದೇಶಗಳಿಗೆ ರಾತ್ರಿ ವೇಳೆಯಲ್ಲಿ ಸಂಚರಿಸುವ ಬಸ್ಸುಗಳು, ರೈಲುಗಳು ಮತ್ತು ವಿಮಾನಗಳಿಗೆ ಅನುಮತಿಸಿದೆ.

6. ಅಧಿಕೃತ ಪ್ರಯಾಣದ ಟಿಕೇಟ್‌ಗಳನ್ನು ಹೊಂದಿರುವ ಪ್ರಯಾಣಿಕರನ್ನು ಬಸ್ ನಿಲ್ದಾಣ/ ರೈಲ್ವೆ ನಿಲ್ದಾಣ/ ವಿಮಾನ ನಿಲ್ದಾಣಗಳಿಂದ ಕರೆತರಲು ಮತ್ತು ಬಿಟ್ಟುಬರಲು ಟ್ಯಾಕ್ಸಿ ಮತ್ತು ಆಟೋಗಳ ಸಂಚಾರಕ್ಕೆ ಅನುಮತಿಸಿದೆ.

7. ದಿನಾಂಕ:24.12.2020ರಂದು ಮಧ್ಯರಾತ್ರಿ ಆಚರಿಸಲಾಗುವ ಕ್ರಿಸ್‌ಮಸ್ ಮಾಸ್‌ಗೆ ದಿನಾಂಕ:17.12.2020ರಂದು ಹೊರಡಿಸಲಾಗಿರುವ ಮಾರ್ಗಸೂಚಿಯನುಸಾರ ಅನುಮತಿಸಿದೆ.

8. ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂಭ್ರಮಾಚರಣೆಯನ್ನು ಆದೇಶ ಸಂಖ್ಯೆ: ಕಂಇ 465 ಟಿಎನ್‌ಆರ್ 2020, ದಿನಾಂಕ:17.12.2020ರಲ್ಲಿನ ಮಾರ್ಗಸೂಚಿಯಂತೆ ಆಚರಿಸತಕ್ಕದ್ದು.

23/12/20

**(ಟಿ.ಎಂ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

## GOVERNMENT OF KARNATAKA

No. RD 158 TNR 2020

Karnataka Government Secretariat,
Vidhana Soudha,
Bengaluru, dated:23-12-2020

## ORDER

**Whereas,** the State has effectively implemented COVID 19 containment measures through strictly enforcing COVID appropriate behaviour and aggressive tracking, testing and isolating, as a result, there is sustained decline in the number of fresh COVID 19 cases in the State for over 2 months now.

**Whereas**, in the above context, with a view to consolidate the substantial gain that have been achieved in the State against the spread of COVID-19, and to fully overcome the pandemic, the State Government vide Order of even number dated 27.11.2020, issued guidelines for surveillance, containment and caution of COVID-19 in the State which will be in force upto 31-12-2020.

**Whereas,** a new variant of SARS- CoV 2 virus has been detected in United Kingdom, which is spreading and growing rapidly in the United Kingdom. It has also been reported that some recent returnees from United Kingdom to the State have tested positive for COVID 19. However, the samples of these patients are undergoing further test to determine if they have contracted a new variant of the virus.

Hence, it is necessitated to take additional containment measures to combat the spread of new variant of SARS-CoV 2. Therefore, in exercise of the powers, conferred under Section 24 of the Disaster Management Act, 2005, the undersigned in the capacity of Chairman, State Executive Committee, hereby directs imposition of night curfew from 11.00 pm to 5.00 am starting 24th December until January 1, 2021, (5.00AM on January 2nd, 2021) as per below given conditions, for strict implementation by Commissioner BBMP, Police Commissioners, District Deputy Commissioners, Superintendents of Police, other Heads of Departments and Authorities.

1. The movement of individuals shall remain strictly prohibited between 11.00 pm to 5.00 am, except for essential activities.

2. There shall be no restriction in movement of all types of goods through trucks, goods vehicle or any goods carriers, including empty vehicles.
3. All industries/companies/organizations which requires operations at night shall be permitted to operate with 50% staff. Movement of employees of such organization shall be allowed on producing valid ID card issued by their respective Organization/Institution.
4. Industries/factories which requires 24/7 operations will be allowed to operate without any restrictions.
5. Movement of long distance night bus, train services and air services are permitted.
6. To and fro movement of taxis and auto are permitted for dropping/pickup of people to/from bus stops/railway stations/Airports. The movement will be allowed on displaying valid tickets.
7. Midnight Christmas Mass on 24th night shall be permitted as per guidelines issued on 17/12/2020.
8. **Celebration of Christmas and New Year festivities shall be as per the guidelines issued vide Order No RD 465 TNR 2020, dated 17-12-2020.**

23/12/20

**(T. M. VIJAY BHASKAR)**
Chief Secretary and Chairman,
State Executive Committee

To:
The Compiler, Karnataka Gazette, Bengaluru